## ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ. 315/2014

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | ಹೈದರ್ | **ಚಾಸಾಃ 13 ಪ್ರಾಸಾಃ 11** |
| **ತಂದೆಯ ಹೆಸರು** | ಅಸೇನ್ ಖಾನ್ | |
| **ವಯಸ್ಸು** | 54 ವರ್ಷ | |
| **ವೃತ್ತಿ** | ಚಾಲಕ | |
| **ವಾಸಸ್ಥಳ** | ಬಸವಾಪಟ್ಟಣ | |

ದಿನಾಂಕಃ **18.07.2022** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಆರೋಪಿಯು ನನಗೆ ಪರಿಚಯವಿರುತ್ತಾರೆ. ನಾನು 1991-98 ರವರೆಗೆ ಬಸವಾಪಟ್ಟಣದ ನೀರಾವರಿ ಇಲಾಖೆಯಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು. ಆರೋಪಿಯು ನಮ್ಮ ಇಲಾಖೆಯಲ್ಲಿ ವರ್ಕ್ ಇನ್ಸ್‌ಪೆಕ್ಟರ್ ಆಗಿ ಕೆಲಸ ಮಾಡುತ್ತಿದ್ದರು. ಪೊಲೀಸರು ನಮ್ಮ ಇಲಾಖೆಗೆ ಬಂದು ಆರೋಪಿಯ ಬಗ್ಗೆ ನನ್ನ ಬಳಿ ಕೇಳಿದ್ದು ಆಗ ನಾನು ಆರೋಪಿಯು ನನ್ನ ಜೊತೆ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ತಿಳಿಸಿರುತ್ತೇನೆ .

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-

ದಿಃ 06-07-2013 ರಂದು ಆರೋಪಿಯು ತನ್ನ ಕ್ಯೂಮುಲಿಟಿ ದಾಖಲೆಯಲ್ಲಿ ತನ್ನ ಜನ್ಮ ದಿನಾಂಕ 06-06-1951 ಎಂದು ಇರುವುದನ್ನು 1 ರ ಜಾಗದಲ್ಲಿ 4 ಎಂದು ಹಾಗೂ ಇಂಗ್ಲೀಷ್ ಅಕ್ಷರಗಳಲ್ಲಿ six , three, fifty one ಎಂದು ಇರುವುದನ್ನು one ನ್ನು four ಎಂದು ತಿದ್ದಿ, ತನ್ನ ಸೇವಾ ಪುಸ್ತಕರದಲ್ಲಿ ನಮೂದಿಸಿಕೊಂಡಿರುತ್ತಾನೆ ಎಂಬ ವಿಚಾರವನ್ನು ತಿಳಿದುಕೊಂಡ ಬಗ್ಗೆ

ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗಶಃ ಹೇಳಿಕೆಯನ್ನು ನಿಪಿ-**15** ಎಂದು ಗುರುತಿಸಲಾಯಿತು. ಸದರಿ ವಿಚಾರ ನನಗೆ ಗೊತ್ತಿದ್ದರು ಸಹ ಆರೋಪಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲು :- ಆರೋಪಿ ಪರ ವಕೀಲರರಿಂದ :-</u>**

ನಾನು ಮತ್ತು ಆರೋಪಿಯು ನೀರಾವರಿ ಇಲಾಖೆಯಲ್ಲಿ ದಿನಕೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದೇವು ಎಂದರೆ ಸರಿ. 1999 ನೇ ಇಸವಿಯಲ್ಲಿ ಆರೋಪಿಗೆ ನೀರಾವರಿ ಇಲಾಖೆಯಲ್ಲಿ ಕೆಲಸ ಖಾಯಂ ಆಗಿ ಅವರಿಗೆ ಹರಪ್ಪನಹಳ್ಳಿಯ ಉಪನೋಂದಣಾಧಿಕಾರಿಗಳ ಕಚೇರಿಗೆ ನೇಮಕ ಮಾಡಲಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಮತ್ತು ಜನ್ಮ ದಿನಾಂಕಕ್ಕೆ ಸಂಬಂಧಿಸಿದ ದಾಖಲೆಗಳನ್ನು ಉಪನೋಂದಣಾಧಿಕಾರಿಗಳ ಕಚೇರಿಗೆ ಕಳುಹಿಸಿಕೊಡಲಾಗಿತ್ತು ಎಂದರೆ ಸರಿ .

**ಮರುವಿಚಾರಣೆ ಇಲ್ಲ .**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**